(ಶ್ರೀ ಟಿ. ಚನ್ನಯ್ಯ.)

ಮೇರೆ ಅವರು ಕನಃ ಕೆಲಸಕ್ಕೆ ಬಂದಾಗ ಅವರ ಗಮನಕ್ಕೆ ಬಂತು. ಬಂದ ಮೇರೆ ಸರಿಪಡಿಸಿದ್ದಾರೆ.

Victoria Hospital (Accommodation).

Q.—859. Sri D. DEVARAJA URS (Hunsur).—

Will the Government be pleased to state :—

(*a*) for how many beds provision was made at the time of starting the Victoria Hospital at Bangalore ;

(*b*) whether the Hospital was extended subsequently ;

(*c*) if so, what is the total number of beds provided at present ;

(*d*) what is the average number of in-patients that are admitted into the Hospital at present ?

A.—Sri T. CHANNIAH (Minister for Public Health and Local Self-Government).—

(*a*) 100.

(*b*) Yes.

(*c*) 380.

(*d*) 43 patients are admitted on an average daily.

ಶ್ರೀ ಡಿ. ದೇವರಾಜ ಅರಸ್.—ಈ 380 ಹಾಸಿಗೆಗಳು ಆಸ್ಪತ್ರೆಗೆ ಬರತಕ್ಕ ರೋಗಿಗಳಿಗೆ ಸಾಕಾಗುತ್ತಾ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಸಾಕಾಗುತ್ತಾ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಆಸ್ಪತ್ರೆಯನ್ನು ಬಡಾವಣೆ ಮಾಡುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ಕೈಕೊಂಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಡಿ. ದೇವರಾಜ ಅರಸ್.—ಈಗ ಹಾಲಿ ಇರತಕ್ಕ ಶಿಬ್ಬಂದಿ ಸಾಲದು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Sri P. R. RAMAIYA.—What is the average number of in-patients per day at present in the Victoria Hospital ?

Sri T. CHANNIAH.—43. That is given in the answer.

Sri P. R. RAMAIYA.—Is it not about 600, Sir ?

Sri T. CHANNIAH.—Total number of in-patients in the hospital is more than 700.

Sri P. R. RAMAIYA.—Is it not that the provision is very inadequate ?

Sri T. CHANNIAH.—I did not hear you. Please repeat your question.

ಶ್ರೀ ಪಿ. ಆರ್. ರಾಮಯ್ಯ.—ಆಪರೇಷನ್ ಥಿಯೇಟರ್ಸ್ ಹೊಸದಾಗಿ ಕಟ್ಟುವುದಕ್ಕೆ ಪ್ರೊವಿಜನ್ ಇತ್ತು. ಅದಕ್ಕೆ ಏನಾದರೂ ಕಾರ್ಯಕ್ರಮ ಕೈಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಕೈಕೊಂಡಿದ್ದಾರೆ. ಈಗ ನಮ್ಮಕ್ಕೆ ಒಂದು ಸರ್ಜಿಕಲ್ ಬ್ಲಾಕ್ ತೆಗೆದುಕೊಂಡಿದ್ದಾರೆ. ಮತ್ತು ಒಂದು ಔಟ್‌ಪೇಷಂಟ್ ಬ್ಲಾಕ್ ಕೂಡ ಕಟ್ಟಬೇಕೆಂದು 8 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ. ಅದರಲ್ಲಿ 4 ಲಕ್ಷ ರೂಪಾಯಿ ಗೋಲ್ಡ್ ಜ್ಯೂಬಿಲಿ ಕಮಿಟಿಯವರು ಕೊಡುತ್ತೇವೆ, ಎಂದು ಒಪ್ಪಿದ್ದಾರೆ. ಅದರ ಪೈಕಿ ಈಗ ಅವರು 2 ಲಕ್ಷ 33 ಸಾವಿರ ರೂಪಾಯಿಗಳನ್ನು ಆಗಲೇ ಕೊಟ್ಟಿದ್ದಾರೆ. ಬಾಕಿ ಹಣವನ್ನು ಕೊಡುತ್ತಾರೆ. ಈಗ 2 ಲಕ್ಷ 91 ಸಾವಿರ ರೂಪಾಯಿಗಳ ಮೆಚ್ಚದಲ್ಲಿ ಸರ್ಜಿಕಲ್ ಬ್ಲಾಕ್ ಕಟ್ಟಬೇಕೆಂದು ಎಸ್ಟಿಮೇಟ್ ಬಂದಿದೆ. ಕೆಲಸ ನಡೆಯುತ್ತಾ ಇದೆ.

Sri R. ANANTARAMAN.—Sir, is it not a fact that the Corporation gave one lakh for the construction of an operation theatre ? Have the Government spent it ?

Sri T. CHANNIAH.—They have subscribed only Rs. 50,000 and that has been merged in this Golden Jubilee Fund, Sir.

Sri R. ANANTARAMAN.—Is it not a fact that last year also Rs. 50 thousand has been given—in all one lakh has been given so far ? Will the Hon'ble Minister kindly verify ?

Sri T. CHANNIAH.—So far, my information is that they have credited only Rs. 50,000 and have not yet paid the balance. Anyway I will verify.

Sri R. ANANTARAMAN.—When are you going to put up the extensions using the Golden Jubilee Fund, Sir ?

Sri T. CHANNIAH.—They are already under construction now.

ಶ್ರೀ ಎ. ವಿ. ನರಸಿಂಹರೆಡ್ಡಿ.—380 ಜನಗಳಿಗೆ ಮಾತ್ರ ಹಾಸಿಗೆಗಳನ್ನು ಒದಗಿಸಲು ಅವಕಾಶವಿದೆ ಎಂದು ಹೇಳಿದ್ದೀರಿ. 700 ಜನಗಳಿಗೆ ಮೇಲ್ಪಟ್ಟು ರೋಗಿಗಳು ಆಸ್ಪತ್ರೆಯಲ್ಲಿರುವಾಗ ಅವರಿಗೆಲ್ಲಾ ಹಾಸಿಗೆಗಳನ್ನು ಒದಗಿಸಲಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಒದಗಿಸಲಾಗಿದೆ. ಕೆಲವರು ಮಂಚ ಇಲ್ಲದೆ ನೆಲದ ಮೇಲೆ ಮಲಗಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನೆಲದಮೇಲೆ ಮಲಗಿರುವವರೆಲ್ಲರಿಗೂ ಹಾಸಿಗೆ ಕೊಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹಾಸಿಗೆ ಕೊಟ್ಟಿದೆ.

ಶ್ರೀ ಟಿ. ಮರಿಯಪ್ಪ.—ಪ್ರತಿ ದಿನವೂ ನರಾನರಿ 43 ಮಂದಿ ರೋಗಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಪ್ರತಿ ದಿನ ಎಷ್ಟು ಜನಕ್ಕೆ ನಿರಾಕರಿಸಲ್ಪಡುತ್ತಿದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಟಿ. ಮರಿಯಪ್ಪ.—ಎಷ್ಟು ಜನ applicants waiting list ನಲ್ಲಿ ಇದ್ದಾರೆ ಎಂಬುದನ್ನು ಹೇಳಬಲ್ಲಿರಾ ?

Sri T. CHANNIAH.—I want notice.

ಶ್ರೀ ಟಿ. ಮರಿಯಪ್ಪ.—ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತಿಯೊಂದು ವಾರ್ಡ್‌ನಲ್ಲೂ ಈಗಿರತಕ್ಕ ಸ್ಥಳದಲ್ಲೇ 10 ಜನ ರೋಗಿಗಳಿಗೆ ಅವಕಾಶ ಇರುವ ಕಡೆ 20-30 ಜನ ರೋಗಿಗಳಿದ್ದು ಅವರೆಲ್ಲರಿಗೂ ಮಂಚಗಳ ಮಧ್ಯೆ ನೆಲದಮೇಲೆ ಹಾಸಿಗೆಗಳನ್ನು ಹಾಕಿಕೊಟ್ಟಿರುವುದು ನರಾನ್ಕಾರದವರ ಗಮನಕ್ಕೆ ಬಂದಿದೆಯೇ ?

Sri T. CHANNIAH.—Even for that I want notice.

ಶ್ರೀ ಟಿ. ಮರಿಯಪ್ಪ.—ಮೊದಲು ಇದ್ದ ಶಿಬ್ಬಂದಿಯನ್ನೇ ಈಗಲೂ continue ಮಾಡುತ್ತಾ ಇದ್ದೀರಿ ಅಲ್ಲವೇ ?

Sri T. CHANNIAH.—Yes, Sir.

ಶ್ರೀ ಟಿ. ಮರಿಯಪ್ಪ.—ರೋಗಿಗಳ ಸಂಖ್ಯೆ ಜಾಸ್ತಿಯಾಗಿದ್ದು, ಅದಕ್ಕೆ ತಕ್ಕಷ್ಟು ಶಿಬ್ಬಂದಿ ಇದೆಯೇ ಇಲ್ಲವೇ ಎಂಬುದನ್ನು ವಿಮರ್ಶೆ ಮಾಡುತ್ತೀರಾ ?

Sri T. CHANNIAH.—Yes, Sir. If any proposal is received in that respect it will be examined.

ಶ್ರೀ ಟಿ. ಮರಿಯಪ್ಪ.—ಪ್ರಪೋಸಲ್ ನಮ್ಮಿಂದ ಬರುವುದು ಅಲ್ಲ. ತಾವೇ ಪ್ರಪೋಸಲ್ ತರಿಸುತ್ತೀರಾ ಅಂತ ? ಈ ಪ್ರಶ್ನೆ ಈಗ ಬಂದಿರುವಾಗ Head of the Department ನಿಂದ ಪ್ರಪೋಸಲ್ಸ್ ತರಿಸಿ ಪರ್ಯಾಲೋಚನೆ ಮಾಡುತ್ತೀರಾ ?

Sri T. CHANNIAH.—Yes, Sir.

Acquisition proceedings pertaining to Kote Harijankeri Extension in Chikballapur Town.

Q.—970. Sri A. MUNIYAPPA (Sidlaghatta—Chikballapur—Scheduled Castes).—

Will the Government be pleased to state :—

(*a*) whether it is a fact that the acquisition proceedings pertaining to the extension of Kote Harijankeri of Chikballapur Town are under correspondence since 1948 ;

(*b*) the reason for not yet disposing of this record till now ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The matter is under correspondence.

ಶ್ರೀ ಎ. ಮುನಿಯಪ್ಪ.—ಈ ಪತ್ರವ್ಯವಹಾರ ಯಾವ ಮಟ್ಟದಲ್ಲಿದೆ ?

ಶ್ರೀ ಟಿ. ಚನ್ನಯ್ಯ.—ಈಗ ಅಕ್ವೈಸಿಷ್ಷ್ ಸ್ಟೇಜ್‌ನಲ್ಲಿ ಇದೆ. ಸರ್ಕಾರದವರಿಗೆ ರಿಕಾರ್ಡ್‌ನ್ನು ಕಳುಹಿಸಿ ಕೊಡುತ್ತಾರೆ ಎಂಬುದಾಗಿ ರಿಪೋರ್ಟು ಕಳುಹಿಸಿ ಕೊಡಲಾಗಿದೆ. ಡೆಪ್ಯುಟಿ ಕಮೀಷನರಿಂದ ನರ್ಕಾರದ ವರಿಗೆ ಆ ರಿಪೋರ್ಟು ಬಂದಮೇಲೆ ಅಕ್ವೈಸಿಷ್ಷ್ ಬಗ್ಗೆ ಜಾಗ್ರತೆ ವಿಹಾರಿಸುವಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಇಷ್ಟು ದಿವಸ ನಿಧಾನ ವಾಗುವುದಕ್ಕೆ ಏನು ಕಾರಣ ?

ಶ್ರೀ ಟಿ. ಚನ್ನಯ್ಯ.—ಕಾರಣವೇನೆಂದರೆ ಮೊದಲು ನರ್ವೇ ನಂಬರ್ 263 ಮತ್ತು 660 ರಲ್ಲಿ ಕೆರೆ ಪಕ್ಕದಲ್ಲಿರುವ ಜಮೀನನ್ನು ಅಕ್ವೈರ್ ಮಾಡಬೇಕೆಂಬುದಾಗಿ ನಲಹೆ ಬಂದಿತ್ತು. ಆಮೇಲೆ ಕೆರೆ ಪಕ್ಕದಲ್ಲಿರುವುದು ಅನಾರೋಗ್ಯ ಎಂದು ಹೇಳಿ ಅದನ್ನು ಅಕ್ವೈರ್ ಮಾಡಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟು 234 ಮತ್ತು 235ನೇ ನರ್ವೇ ನಂಬರುಗಳಲ್ಲಿ ಜಾಗ ಅಕ್ವೈರ್‌ಮಾಡತಕ್ಕದ್ದು ಎಂದು ಹೇಳಿ ರಿಕಾರ್ಡ್ ಬಿಲ್ಡಪ್ ಆಗಿದೆ. ಅದರ ಮೇಲೆ ಒಂದು ಸ್ಕೆಟ್ ಪ್ಲಾನ್ ಮುನಿಸಿಪಲ್ ಪ್ರೆಸಿಡೆಂಟರಿಗೆ ಅವಶ್ಯಾರರು ಕಳುಹಿಸಿಕೊಡಬೇಕಾಗಿತ್ತು ; ಅದನ್ನು ಡಿಸೆಂಬರ್‌ನಲ್ಲಿ ಕಳುಹಿಸಿಕೊಟ್ಟಿದ್ದಾರೆ. ಆ ರೀತಿ ಅಕ್ವೈಸಿಷ್ಷ್ ಆಗ ಬೇಕಾದ ಕ್ರಮದಲ್ಲಿ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಅಕ್ವೈಸಿಷ್ಷ್ ಛಾರ್ಜಸ್ ಮೂರುಸಾವಿರ ರೂಪಾಯಿಗಳನ್ನು ಮೂರುವರ್ಷಗಳ ಹಿಂದೆ ಖಜಾನೆಗೆ ಡಿಪಾಜಿಟ್ ಮಾಡಿರುವುದು ನರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ರೂ. 2,758-6-3 ಮಾತ್ರ ಕ್ರೆಡಿಟ್ಟಾಗಿದೆ.

ಶ್ರೀ ಎ. ಮುನಿಯಪ್ಪ.—ಕೆರೆಪಕ್ಕದಲ್ಲಿರುವ ಜಮೀನು ಬಿಟ್ಟು ಬೇರೆ ಜಮೀನು ಅಕ್ವೈರ್‌ಮಾಡಬೇಕೆಂದು ವ್ಯವಹಾರ ನಡೆಯುತ್ತಿರುವುದು ಎಷ್ಟು ದಿವಸಗಳಿಂದ ?

ಶ್ರೀ ಟಿ. ಚನ್ನಯ್ಯ.—ಯಾವ ತಾರೀಖಿನಿಂದ ಎಂಬುದು ನಮಗೆ ವರದಿಯಾಗಿಲ್ಲ.

ಶ್ರೀ ಎ. ಮುನಿಯಪ್ಪ.—ಜಮೀನು ಮಾಲೀಕರು ಬಂದು ಅಕ್ವಿಜಿಷ್ಷ್ ಆಫೀಸರನ್ನು ಹಣ ಅನೇಕಸಲ ಕೇಳಿದರೂ ಬಹಳ ನಿಧಾನವಾಗಿ ಕೆಲಸ ಮಾಡುತ್ತಿರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಅಕ್ವೈಸಿಷ್ಷ್ ಮಾಡುವ ಕ್ರಮದಲ್ಲಿ ಸ್ವಲ್ಪ ನಿಧಾನವಾಗಿದೆಯೆಂದು ಗೊತ್ತಾಗಿದೆಯೇ ಹೊರತು ಬೇರೆ ವಿಚಾರ ನರ್ಕಾರಕ್ಕೆ ತಿಳಿದು ಬಂದಿಲ್ಲ.